(ಈ) ತಾಳಿಕೋಟೆ ಮುಖ್ಯ ರಸ್ತೆಯಲ್ಲಿ 26 ಎಕರೆ ಜಮೀನನ್ನು ಕೈಗಾರಿಕಾ ವಸಾಹತು ಸ್ಥಾಪನೆಗಾಗಿ ಹಂಚಿಕೆ ಮಾಡುವಂತೆ, ಆಯುಕ್ತರು, ಕರ್ನಾಟಕ ಗೃಹ ಮಂಡಳಿಯವರಿಗೆ, ಕೆ.ಎಸ್.ಎಸ್.ಐ.ಡಿ.ಸಿ. ಯವರು ದಿನಾಂಕ 21-06-2007 ರಲ್ಲಿ ಕೋರಿರುತ್ತಾರೆ.

866. **ಶ್ರೀ ಮುನಿಯಪ್ಪ ಎಸ್. ಎಂ. (ಚಿಕ್ಕಬಳ್ಳಾಪುರ)**:- ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಬಗರ್ ಹುಕುಂ ಸಾಗುವಳಿ ಸಮಿತಿ ರಚನೆ ಮಾಡುವ ವಿಷಯ ಸರ್ಕಾರದ ಮುಂದೆ ಇದೆಯೇ;

(ಆ) ಹಾಗಿದ್ದಲ್ಲಿ, ಬಗರ್ ಹುಕುಂ ಸಾಗುವಳಿ ಸಮಿತಿಯನ್ನು ಯಾವಾಗ ರಚನೆ ಮಾಡಲಾಗುವುದು;

(ಇ) ಈಗಾಗಲೇ ಈ ಸಮಿತಿಗಳನ್ನು ಕೆಲವು ಕ್ಷೇತ್ರಗಳಲ್ಲಿ ಅನುಷ್ಠಾನಗೊಳಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಉಳಿದ ಕ್ಷೇತ್ರಗಳಲ್ಲಿ ಇನ್ನು ಇಂತಹ ಸಮಿತಿಗಳ ರಚನೆ ಆಗದಿರುವ ಬಗ್ಗೆ ಸರ್ಕಾರದಿಂದ ಯಾವ ಕ್ರಮ ಕೈಗೊಳ್ಳಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ಕಂದಾಯ ಸಚಿವರು):-

(ಅ) ಹೌದು

(ಆ) 123 ತಾಲ್ಲೂಕುಗಳಿಗೆ ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗಳನ್ನು ರಚಿಸಲಾಗಿದೆ. ಉಳಿದ ತಾಲ್ಲೂಕುಗಳ ಸಮಿತಿಗಳನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

(ಇ) ಹೌದು, ಉಳಿದ ತಾಲ್ಲೂಕುಗಳ ಸಮಿತಿಗಳನ್ನು ರಚಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

774. **ಶ್ರೀ ರಮೇಶ್ ಕುಮಾರ್ ಕೆ. ಆರ್. (ಶ್ರೀನಿವಾಸಪುರ)**:- ಮಾನ್ಯ ಉಪಮುಖ್ಯಮಂತ್ರಿಗಳು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ನಿರ್ವಹಣೆಯ ವ್ಯಾಪ್ತಿಯಲ್ಲಿ ಬರುವ ಒಟ್ಟು ಕೆರೆಗಳ ಸಂಖ್ಯೆ ಎಷ್ಟು;

(ಆ) ಈವರೆವಿಗೂ ಎಷ್ಟು ಕೆರೆಗಳನ್ನು ಹೂಳೆತ್ತುವ ಕಾರ್ಯಕ್ರಮದಲ್ಲಿ ಸೇರಿಸಲಾಗಿದೆ;

(ಇ) ಈ ಪೈಕಿ ಎಷ್ಟು ಕೆರೆಗಳ ಪೋಷಕ ಕಾಲುವೆ (ಫೀಡರ್ ಚಾನಲ್) ತೋಬು ಕಾಲುವೆ, ಕೆರೆ ಕಟ್ಟೆ ದುರಸ್ತಿ ಕೆಲಸಗಳಿಗಾಗಿ ಈವರೆಗೆ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ (ವಿವರ ನೀಡುವುದು)?

ಶ್ರೀ ಬಿ. ಎಸ್. ಯಡಿಯೂರಪ್ಪ (ಮಾನ್ಯ ಉಪಮುಖ್ಯಮಂತ್ರಿಗಳು):-

(ಅ) ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ 35 ಕೆರೆಗಳು ಬರುತ್ತವೆ.

(ಆ) ಕೆರೆಗಳ ಹೂಳೆತ್ತುವ ಕಾರ್ಯಕ್ಕಾಗಿ ಪ್ರತ್ಯೇಕ ಕಾರ್ಯಕ್ರಮವನ್ನು ಹಮ್ಮಿಕೊಂಡಿರುವುದಿಲ್ಲ. ಕೆರೆಗಳ ಜೀರ್ಣೋದ್ಧಾರ/ಆಧುನೀಕರಣ ಲೆಕ್ಕಶೀರ್ಷಿಕೆಯಡಿಯಲ್ಲಿ ಕೆರೆಗಳ ಹೂಳೆತ್ತುವ ಕಾರ್ಯವೂ ಸೇರಿದಂತೆ ಕೆರೆಗಳನ್ನು ಅಭಿವೃದ್ಧಿ ಪಡಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಶ್ರೀನಿವಾಸಪುರ ತಾಲ್ಲೂಕಿನಲಿ ಕಳೆದ 4 ವರ್ಷಗಳಲ್ಲಿ ರೈತ ಕಾಯಕ ಕೆರೆ ಯೋಜನೆಯಡಿಯಲ್ಲಿ 1 ಕಾಮಗಾರಿ, ನಬಾರ್ಡ್ ಸಂಸ್ಥೆಯ ಸಾಲಸೌಲಭ್ಯದೊಂದಿಗೆ ಆರ್.ಐ.ಡಿ.ಎಫ್.9 ರಡಿಯಲ್ಲಿ 1 ಕಾಮಗಾರಿ, ಆರ್.ಐ.ಡಿ.ಎಫ್. 10ರಡಿಯಲ್ಲಿ 2 ಕಾಮಗಾರಿ, ಆರ್.ಐ.ಡಿ.ಎಫ್. 11 ರಡಿಯಲ್ಲಿ 4 ಕಾಮಗಾರಿಗಳನ್ನು ಹಾಗೂ ಲೆಕ್ಕ ಶೀರ್ಷಿಕೆ 4702 ಅಡಿಯಲ್ಲಿ 6 ಕೆರೆಗಳ ಅಭಿವೃದ್ಧಿ ಕಾಮಗರಿಗಳನ್ನು ಕೈಗೊಳ್ಳಲಾಗಿದೆ.

(ಇ) ಕಳೆದ 4 ವರ್ಷಗಳಲ್ಲಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ 14 ಕೆರೆಗಳನ್ನು ರೂ. 352.80 ಲಕ್ಷಗಳ ಅಂದಾಜು ಮೊತ್ತಕ್ಕೆ ಕೈಗೊಂಡಿದ್ದು, ಈವರೆಗೆ ರೂ. 204.60 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ. ವಿವರಗಳನ್ನು ಅನುಬಂಧ-1ರಲ್ಲಿ ನೀಡಲಾಗಿದೆ.

ಅನುಬಂಧ–1

ಕಳೆದ 4 ವರ್ಷಗಳಲ್ಲಿ ಶ್ರೀನಿವಾಸಪುರ ತಾಲ್ಲೂಕಿನಲ್ಲಿ ಕೈಗೊಳ್ಳಲಾದ ಸಣ್ಣ ನೀರಾವರಿ ಕೆರೆಗಳ ಅಭಿವೃದ್ಧಿ

ಕಾಮಗಾರಿಗಳ ವಿವರಗಳು

ಕ್ರ.ಸಂ.	ಲೆಕ್ಕ ಶೀರ್ಷಿಕೆ	ಕಾಮಗಾರಿ ಪ್ರಾರಂಭವಾದ ವರ್ಷ	ಕಾಮಗಾರಿಯ ಹೆಸರು	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇದುವರೆಗಿನ ವೆಚ್ಚ ಮೇ 2007ರ ಅಂತ್ಯಕ್ಕೆ (ರೂ. ಲಕ್ಷಗಳಲ್ಲಿ)
1	ರೈತಕಾಯಕ ಕೆರೆ	2003–04	ಶ್ರೀನಿವಾಸಪುರ ಅಮಾನಿಕೆರೆ	24.50	16.24
2	ಆರ್.ಐ.ಡಿ.ಎಫ್. 9	2003–04	ಕೋರನಹಳ್ಳಿ ಕೆರೆ ಅಭಿವೃದ್ಧಿ ಕಾಮಗಾರಿ	16.30	14.44
3	ಆರ್.ಐ.ಡಿ.ಎಫ್. 10	2005	ಕೂಳಗುರ್ಕಿ ಕೆರೆ ಪೋಷಕ ಕಾಲುವೆ ಅಭಿವೃದ್ಧಿ ಕಾಮಗಾರಿ	29.00	16.62
4	ಆರ್.ಐ.ಡಿ.ಎಫ್. 10	2005	ಬಂಗವಾಡಿ ಕೆರೆ ಅಭಿವೃದ್ಧಿ ಕಾಮಗಾರಿ	29.00	15.10
5	ಆರ್.ಐ.ಡಿ.ಎಫ್. 11	2006	ನಂಬಿಹಳ್ಳಿ ದೊಡ್ಡಕೆರೆ ಕಲ್ಕುಟ್ಟಣೆ ಕಾಮಗಾರಿ	15.00	11.20
6	ಆರ್.ಐ.ಡಿ.ಎಫ್. 11	2006	ಬಡಿಪಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿ	29.00	16.11
7	ಆರ್.ಐ.ಡಿ.ಎಫ್. 11	2007	ಲಕ್ಷ್ಮೀಪುರ ದೊಡ್ಡಕೆರೆ ಅಭಿವೃದ್ಧಿ ಕಾಮಗಾರಿ	30.00	22.50
8	ಆರ್.ಐ.ಡಿ.ಎಫ್. 11	2006	ಕೂರಗೇಪಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿ	30.00	11.82
9	4702	2007	ಮುತ್ತಕಪಲ್ಲಿ ದೊಡ್ಡಕೆರೆ ಆಧುನೀಕರಣ ಕಾಮಗಾರಿ	25.00	5.86
10	4702	2007	ರೋಣೂರು ದೊಡ್ಡಕೆರೆ ಆಧುನೀಕರಣ ಕಾಮಗಾರಿ	25.00	8.91
11	4702	2007	ತಿಮ್ಮಸಂದ್ರ ದೊಡ್ಡಕೆರೆ ಆಧುನೀಕರಣ ಕಾಮಗಾರಿ	25.00	18.40
12	4702	2007	ಇಲ್ಲೋಣಿ ದೊಡ್ಡಕರೆ ಆಧುನೀಕರಣ ಕಾಮಗಾರಿ	25.00	17.10
13	4702	2007	ಬುರುಕಾಯಲಕೋಟೆ ನಾರಪ್ಪನಾಯಕರ ಕೆರೆ ಆಧುನೀಕರಣ ಕಾಮಗಾರಿ	25.00	17.43
14	4702	2007	ಶೆಟ್ಟಿಹಳ್ಳಿ ಕೆರೆ ಆಧುನೀಕರಣ ಕಾಮಗಾರಿ	25.00	12.87
			ಒಟ್ಟು	**352.80**	**204.60**